11) ವಿಷಯ : ಅನಧಿಕೃತ ಗಣಿಗಾರಿಕೆ ನಿಲ್ಲಿಸುವ ಬಗ್ಗೆ

ಶ್ರೀ ಎಸ್. ಸಂಪಂಗಿ (ಬಾಗೇಪಲ್ಲಿ) : ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರವಾದ ಗುಡಿಬಂಡೆ ತಾಲ್ಲೂಕಿನ ವರ್ಲಕೊಂಡ ಗ್ರಾಮದ ವರ್ಲಕೊಂಡ ಬೆಟ್ಟದಲ್ಲಿ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯವರ ಪವಿತ್ರವಾದ ದೇವಾಲಯವಿದ್ದು, ಈ ದೇವಾಲಯದ ಬೆಟ್ಟದ ಸುತ್ತಮುತ್ತ ಕಲ್ಲುಗಣಿ ಗಾರಿಕೆಯು ನಡೆಯುತ್ತಿದ್ದು, ಇದರಿಂದ ವರ್ಲಕೊಂಡ ಹಾಗೂ ಸುತ್ತಮುತ್ತಲ ಗ್ರಾಮದ ಜನತೆಯು ತತ್ತರಿಸಿ ಹೋಗಿದ್ದು, ಮನೆಗಳೆಲ್ಲಾ ಬಿರುಕು ಬಿಟ್ಟು ಅತೀ ಹೆಚ್ಚಾಗಿ ವಾಯುಮಾಲಿನ್ಯವಾಗುತ್ತಿದ್ದು, ಇದರಿಂದ ಬೆಳೆದ ಬೆಳೆಗಳು ಸಹ ನಷ್ಟವಾಗಿದ್ದು, ಅಲ್ಲದೇ ದೇವಾಲಯವು ಸಹ ಶಿಥಿಲಾವಸ್ಥೆಯಲ್ಲಿ ಮುಳುಗುತ್ತಿದ್ದು, ಕೂಡಲೇ ಇಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಸರ್ಕಾರವು ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ) : ಚಿಕ್ಕಬಳ್ಳಾಪುರ, ಜಿಲ್ಲೆ, ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರವಾದ ಗುಡಿಬಂಡೆ ತಾಲೂಕಿನ ವರ್ಲಕೊಂಡ ಗ್ರಾಮದ ಸರ್ವೆ ನಂ.251 ರಲ್ಲಿ 12-00 ಎಕರೆ ಪ್ರದೇಶದಲ್ಲಿ 5 ಕಟ್ಟಡ ಕಲ್ಲುಗಣಿ ಗುತ್ತಿಗೆಗಳನ್ನು ಕಂದಾಯ ಇಲಾಖೆಯ ನಿರಾಕ್ಷೇಪಣಾ ಪತ್ರ ಪಡೆದ ನಂತರ 2-4-2009 ರಿಂದ ಅನ್ವಯವಾಗುವಂತೆ 5-ವರ್ಷಗಳ ಅವಧಿಗೆ ಮಂಜೂರು ಮಾಡಲಾಗಿದೆ. ಈ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗುತ್ತಿಗೆ ದಾರರು ಕಟ್ಟಡದ ಕಲ್ಲು, ಸೃಜುಗಲ್ಲು ಮತ್ತು ಚಪ್ಪಡಿಗಳನ್ನು ತೆಗೆಯುತ್ತಿದ್ದು, ಗಣಿಗಾರಿಕೆ ಸ್ಫೋಟಕವನ್ನು ಬಳಕೆ ಮಾಡುವುದಿಲ್ಲ.

ಈ ಕಲ್ಲುಗಣಿ ಗುತ್ತಿಗೆ ಪ್ರದೇಶಗಳು ವರ್ಲಕೊಂಡ ಬೆಟ್ಟದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದಿಂದ 1/2 ಕಿಲೋ. ಮೀಟರ್ ಗಿಂತಲೂ ಹೆಚ್ಚು ದೂರದಲ್ಲಿರುತ್ತವೆ. ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 6(2) ರನ್ವಯ ಸಾರ್ವಜನಿಕ ರಚನೆ ಗಳಿಂದ 200 ಮೀಟರ್ ಅಂತರವನ್ನು ಬಿಟ್ಟು ಗಣಿಗಾರಿಕೆಗೆ ಸ್ಫೋಟಕ ಬಳಕೆ ಮಾಡಲು ಅವಕಾಶವಿರುತ್ತದೆ. ಈ ಪ್ರದೇಶದಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯಿಂದ ವರ್ಲಕೊಂಡ ಬೆಟ್ಟದ ದೇವಾಲಯಕ್ಕೆ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುವುದು ಕಂಡು ಬಂದಿರುವುದಿಲ್ಲ.

ಈ ಪ್ರದೇಶದಲ್ಲಿ ಯಾವುದೇ ಅಕ್ರಮ ಕಲ್ಲುಗಣಿಗಾರಿಕೆ ನಡೆಯುತ್ತಿರುವುದಿಲ್ಲ. ಹಾಗೂ ಸದರಿ ಪ್ರದೇಶದಲ್ಲಿ ಹೆಚ್ಚಿನ ನಿಗಾವಹಿಸಿ ಅನಧಿಕೃತ ಗಣಿಗಾರಿಕೆ ಕಂಡು ಬಂದಲ್ಲಿ ಅಂತಹವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳ ಲಾಗುವುದು.

ಶ್ರೀ ಎನ್. ಸಂಪಂಗಿ : (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಮ್ಮ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಗುಡಿಬಂಡೆ ತಾಲ್ಲೂಕಿನಲ್ಲಿ ವರ್ಲಕೊಂಡ ಎಂಬ ಬಹಳ ಪವಿತ್ರವಾದ ಬೆಟ್ಟ ಇದೆ. ಈಗಾಗಲೇ ಅದನ್ನು ಪ್ರವಾಸೋದ್ಯಮ ಇಲಾಖೆಗೆ ಸೇರಿಸುವುದಕ್ಕೆ ನಾವೆಲ್ಲಾ ಇಲಾಖೆಯವರಿಗೆ ಪ್ರಪೋಸಲ್ ಕೊಟ್ಟಿದ್ದೇವೆ. ಏಕೆ ಶಿಲಾ ಬೆಟ್ಟ ಇದು. ಈ ಬೆಟ್ಟದಲ್ಲಿ ಸುತ್ತಮುತ್ತ ಇರುವವರು ಅನೇಕ ಹಳ್ಳಿಗಳವರು ವ್ಯವಸಾಯದ ಮೇಲೆ ಅವಲಂಬನೆ ಆಗಿರುವವರು. ಅದರಲ್ಲೂ ಹೆಚ್ಚಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರು ಮತ್ತು ಅನೇಕರು ವ್ಯವಸಾಯ ಮಾಡತಕ್ಕಂತಹ ಪ್ರದೇಶ ಇದು ಒಂದು ಏಕ ಶಿಲಾ ಬೆಟ್ಟ. ಅಲ್ಲಿ ಲಕ್ಷ್ಮಿ ನರಸಿಂಹಸ್ವಾಮಿ ಎಂಬ ಬಹಳ ಪವಿತ್ರವಾದ ದೇವಸ್ಥಾನ ಇದೆ. ಇಲ್ಲಿ ವಾರ್ಷಿಕ ಜಾತ್ರೆ ನಡೆದಂತಹ ಸಂದರ್ಭದಲ್ಲಿ ಅನೇಕ ಜನರು ಬರುತ್ತಾರೆ. ಏಕ ಶಿಲಾ ಬೆಟ್ಟ ಎಂದರೆ ಸುತ್ತ ಮುತ್ತ ಯಾವುದೇ ಬೆಟ್ಟಗಳಿಲ್ಲ. ಬರೀ ವ್ಯವಸಾಯ ಮಾಡುವ ಪ್ರದೇಶ ಇದೆ. ಆ ಬೆಟ್ಟದ ಪಕ್ಕದಲ್ಲಿ ಗಣಿಗಾರಿಕೆಗೆ ಕೊಟ್ಟಿದ್ದಾರೆ. ಇದಕ್ಕೆ ಸುತ್ತಮುತ್ತ ಇರುವ ಹಳ್ಳಿಗಳವರು ವಿರೋಧ ಮಾಡಿದ್ದಾರೆ. ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಕೇಂದ್ರ ಸಚಿವರೂ ಕೂಡ ಇದನ್ನು ನಿಲ್ಲಿಸಬೇಕೆಂದು ಜಿಲ್ಲಾಧಿಕಾ ರಿಗಳಿಗೆ ಹೇಳಿದ್ದಾರೆ, ಸರ್ಕಾರಕ್ಕೆ ಕೂಡ ಹೇಳಿದ್ದಾರೆ. ಇಷ್ಟೆಲ್ಲಾ ಆದರೂ ಕೂಡ ದೇವಸ್ಥಾನದ ಸುತ್ತ ಮುತ್ತ ಗಣಿಗಾರಿಕೆ ಬೇಡವೆಂದು ಸುತ್ತ ಮುತ್ತ ಇರುವ ಹಳ್ಳಿಗಳವರು ಪೋಲೀಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಟ್ಟರೆ, ಆ ಪೋಲೀಸ್ ಸ್ಟೇಷನ್ ಅಧಿಕಾರಿಗಳು ಈ ಹಳ್ಳಿ ಜನಗಳ ಮೇಲೆಯೇ ದೌರ್ಜನ್ಯ ಮಾಡುತ್ತಿದ್ದಾರೆ. ಅವರ ಮೇಲೆಯೇ ಕೇಸ್ ಬುಕ್ ಮಾಡುತ್ತೇ ವೆಂದು ಹೇಳುತ್ತಾರೆ. ಈ ಏಕ ಶಿಲಾ ಬೆಟ್ಟದ ಮೇಲೆ ಗಣಿಗಾರಿಕೆ ಮಾಡುವುದಕ್ಕೆ ನೀವು ಏಕೆ ಅವಕಾಶ ಕೊಡುತ್ತಿದ್ದೀರಿ, ನೀವು ಗಣಿಗಾರಿಕೆಗೆ ಅನುಮತಿ ಕೊಡುವಾಗ ಸಂಬಂಧಪಟ್ಟ ತಹಶೀಲ್ದಾರ್‌ರವರಿಗಾಗಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಗಮನಕ್ಕಾಗಲಿ ತರುವುದಿಲ್ಲ. ನೇರವಾಗಿ ಇಲ್ಲಿಯೇ ಮೈನ್ಸ್ ಅಂಡ್ ಜಿಯಾಲಜಿ ಆಫೀಸ್‌ನಲ್ಲಿ ಅರ್ಜಿ ಹಾಕುತ್ತಾರೆ, ಇಲ್ಲಿ ಅವರಿಗೆ ಮಂಜೂರಾತಿ ಮಾಡಿ ಬಿಡುತ್ತೀರಿ, ಆ ಮೇಲೆ NOC ಯನ್ನು ಅಲ್ಲಿಗೆ

ಕಳುಹಿಸುತ್ತೀರಿ. ನೀವು ಅನುಮತಿ ಕೊಡುವುದಕ್ಕೆ ಮುಂಚೆ ಬಂದು ಸ್ಥಳ ಪರಿಶೀಲನೆ ಮಾಡಿಲ್ಲ, ಅದು ಕೊಡಬಹುದೋ ಬೇಡವೋ ಎಂದು ತೀರ್ಮಾನ ತೆಗೆದುಕೊಂಡಿಲ್ಲ. ನೇರವಾಗಿ ಇಲ್ಲಿಂದಲೇ ಅವರಿಗೆ ಅನುಮತಿ ಕೊಟ್ಟು ಗಣಿಗಾರಿಕೆ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಇವತ್ತು ನೀವು ಕೊಟ್ಟಿರುವ ಉತ್ತರ ನೋಡಿದರೆ, ಗಣಿಗಾರಿಕೆಯವರ ಪರವಾಗಿಯೇ ಉತ್ತರ ಇದೆ. ಆದ್ದರಿಂದ ನಾನು ಪ್ರಶ್ನೆ ಕೇಳುವ ಅವಶ್ಯಕತೆ ಇಲ್ಲ. ದಯವಿಟ್ಟು ನೀವು ಆ ಜನರ ಪರಿಸ್ಥಿತಿಯನ್ನು ನೋಡಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅನೇಕ ರೈತರಿಗೆ ಇವತ್ತು ಅವ್ಯವಸ್ಥೆ ಆಗುತ್ತಿದೆ, ಬೆಳೆಗಳು ನಾಶ ಆಗುತ್ತಿವೆ, ಆದ್ದರಿಂದ ವಿಶೇಷವಾಗಿ ಇದನ್ನು ಗಮನಿಸಿ ಇದನ್ನು ತತಕ್ಷಣ ನಿಲ್ಲಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ನಾನು ಗಣಿಗಾರಿಕೆ ವಿಚಾರ ಪ್ರಶ್ನೆ ಕೇಳುವುದಕ್ಕೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಇರುವುದಿಲ್ಲ. ನಮ್ಮ ಮಾನ್ಯ ಸುರೇಶ್ ಕುಮಾರ್‌ರವರು ಇರುತ್ತಾರೆ. ತಾವು ಇದರ ಬಗ್ಗೆ ಕ್ರಮ ತೆಗೆದುಕೊಂಡು ತತಕ್ಷಣ ನಿಲ್ಲಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಪಂಗಿಯವರು ಒಂದು ವಿಚಾರವನ್ನು ಇಲ್ಲಿ ಇಟ್ಟಿದ್ದಾರೆ. ದೇವಸ್ಥಾನ ಸೀಳುತ್ತಿದೆ, ರೈತರಿಗೆ ಆತಂಕವಾಗಿದೆ, ಕಂಪ್ಲೇಂಟ್ ಕೊಟ್ಟರೂ ಕೂಡ ಅವರ ಮೇಲೆಯೇ ಕೇಸ್ ಹಾಕುತ್ತಿದ್ದಾರೆಂದು ಹೇಳಿದರು. ಆದರೆ ನಮ್ಮ ಹತ್ತಿರ ಇರುವ ಮಾಹಿತಿ ಪ್ರಕಾರ ಅವರು ಯಾವುದೇ ಸ್ಫೋಟಕಗಳನ್ನು ಉಪಯೋಗಿಸುತ್ತಿಲ್ಲ. 2009 ರಲ್ಲಿ ಅವರು NOC ತೆಗೆದುಕೊಂಡು ಐದು ವರ್ಷಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ. ನೀವು ಇವತ್ತು ಹೇಳಿರುವ ಹಿನ್ನೆಲೆಯಲ್ಲಿ ನಾನು ಇವತ್ತೇ ಮೈನ್ಸ್ ಅಂಡ್ ಜಿಯಾಲಜಿ ಡೈರೆಕ್ಟರ್‌ಗೆ ಸ್ಪಾಟ್‌ಗೆ ಹೋಗಿ ನೋಡಿ ಸರ್ಕಾರಕ್ಕೆ ವರದಿ ಕೊಡುವುದಕ್ಕೆ ಹೇಳುತ್ತೇನೆ. ಇದರ ಬಗ್ಗೆ ನಾವು ಕ್ರಮ ತೆಗೆದುಕೊಳುತ್ತೇವೆ. ನಿಜವಾಗಿಯೂ ಕೂಡ ಅವರು NOC ಮೀರಿ ಲೈಸೆನ್ಸ್ ಮೀರಿ ಸ್ಫೋಟಕ ಉಪಯೋಗಿಸುತ್ತಿದ್ದರೆ ಆ ಒಂದು ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಸಂಪಂಗಿ : ತಾವು ವಿಶೇಷ ಗಮನ ಹರಿಸಿ ಇದನ್ನು ನಿಲ್ಲಿಸಬೇಕು ಅಷ್ಟೆ.